ಯಾವುದನ್ನು ಮಾಡಬಾರದೆಂದು ಜನ ನಿಷೇಧಿಸುತ್ತಿದ್ದರೋ, ಅದನ್ನೇ ಮಾಡುವುದು ಬಾಲ್ಯದಿಂದಲೂ ನನ್ನ ಸ್ವಭಾವವಾಗಿಹೋಗಿತ್ತು. ಆದರೆ ಶ್ರೀರಾಮಕೃಷ್ಣರು ಬೇರೊಂದು ಬಗೆಯದೇ ಆದ ವಿಶಿಷ್ಟ ಗುರುಗಳಾಗಿದ್ದರು. ಅವರು ಒಂದು ಕ್ಷಣವೂ ನನ್ನನ್ನು ಯಾವುದಕ್ಕೂ ನಿರ್ಬಂಧಿಸಲಿಲ್ಲ. ಅದೇ ಒಂದು ಅದ್ಭುತದಂತೆ ನನ್ನ ಜೀವನದಲ್ಲಿ ಕೆಲಸ ಮಾಡಿತು. ಯಾವಾಗ ಕಾಮುಕ ಆಲೋಚನೆ ನನ್ನ ಮನಸ್ಸಿನಲ್ಲಿ ಎದ್ದರೂ ಅದು ಬೇಗನೆ ಮಾಸುತ್ತಿತ್ತು. ನನ್ನ ತಲೆಯು ಯಾವಾಗಲೂ ಬ್ರಹ್ಮ ಮತ್ತು ಶಕ್ತಿಯ ಮುಂದೆ ಬಾಗುತ್ತಿತ್ತು, ಶ್ರೀರಾಮಕೃಷ್ಣರು ನನ್ನ ಮನಃಪಟಲದಲ್ಲಿ ಕಾಣಿಸಿಕೊಳ್ಳುತ್ತಿದ್ದರು. ಪ್ರಾಪಂಚಿಕರ ಕೀಳು ಮಾತು ಮತ್ತು ಕೃತ್ಯಗಳ ಹಿಂದೆ ಕೂಡ ನಾನು ಭಗವಂತನ ಅನಂತ ಲೀಲೆಯನ್ನೇ ಕಾಣುತ್ತಿದ್ದೆ.

ಒಮ್ಮೊಮ್ಮೆ ಸುಳ್ಳು ಹೇಳುವುದು ನನ್ನ ಅಭ್ಯಾಸವಾಗಿತ್ತು. ಆದರೆ ಶ್ರೀರಾಮಕೃಷ್ಣರು ಸತ್ಯದ ವಿಷಯದಲ್ಲಿ ಅತ್ಯಂತ ನಿಷ್ಠಾವಂತರಾಗಿದ್ದರು. ವಿನೋದಕ್ಕಾಗಿ ಸುಳ್ಳು ಹೇಳುವುದಕ್ಕೂ ಅವರು ಯಾರಿಗೂ ಒಪ್ಪಿಗೆ ಕೊಡುತ್ತಿರಲಿಲ್ಲ. ಆದರೂ ನಾನು ನನ್ನ ಈ ತಪ್ಪನ್ನು ಒಪ್ಪಿಕೊಳ್ಳಲು ಹೋದಾಗ, "ಚಿಂತಿಸದಿರು. ನೀನು ಕೂಡ ನನ್ನಂತೆಯೇ ಸತ್ಯ ಮತ್ತು ಅಸತ್ಯಗಳಿಗೆ ಅತೀತನಾಗಿರುವೆ" ಎಂದರು. ಆದರೂ ಇದಾದನಂತರ, ಸುಳ್ಳು ಹೇಳುವ ಆಲೋಚನೆ ನನ್ನ ಮನಸ್ಸಿನಲ್ಲಿ ಎದ್ದಾಗಲೆಲ್ಲ ಶ್ರೀರಾಮಕೃಷ್ಣರ ಮೂರ್ತಿ ಕಾಣಿಸಿಕೊಳ್ಳುತ್ತಿತ್ತು; ಅಸತ್ಯ ನನ್ನ ಬಾಯಿಂದ ಹೊರ ಬರುತ್ತಲೇ ಇರಲಿಲ್ಲ.

ಶ್ರೀರಾಮಕೃಷ್ಣರು ನನ್ನ ಹೃದಯವನ್ನು ಸಂಪೂರ್ಣವಾಗಿ ಅವರ ವಶಕ್ಕೆ ತೆಗೆದುಕೊಂಡು ಅದನ್ನು ತಮ್ಮ ಪ್ರೀತಿಯಿಂದ ಬಂಧಿಸಿರುವರು. ಅಂತಹ ಪ್ರೀತಿಯನ್ನು ಪ್ರಪಂಚದ ಯಾವ ಮಾನದಂಡದಿಂದಲೂ ಅಳೆಯಲು ಸಾಧ್ಯವಿಲ್ಲ. ನಾನು ಯಾವುದಾದರೂ ಸದ್ಗುಣವನ್ನು ಪಡೆದಿದ್ದರೆ ಅದು ನನ್ನ ಪ್ರಯತ್ನದಿಂದಲ್ಲ, ಕೇವಲ ಅವರ ಕೃಪೆಯಿಂದ. ಅವರು ಅಕ್ಷರಶಃ ನನ್ನ ಪಾಪಗಳನ್ನು ಸ್ವೀಕರಿಸಿದರು ಮತ್ತು ನನ್ನ ಆತ್ಮವನ್ನು ಮುಕ್ತಗೊಳಿಸಿದರು. ಭಕ್ತರಲ್ಲಿ ಯಾರಾದರೂ ಪಾಪದ ವಿಷಯವಾಗಿ ಮಾತನಾಡಿದರೆ, "ಅದನ್ನು ನಿಲ್ಲಿಸಿ. ಪಾಪದ ವಿಷಯ ಏಕೆ ಮಾತನಾಡುತ್ತೀರಿ? ಯಾರು ಪದೇ ಪದೇ, 'ನಾನೊಂದು ಹುಳು, ನಾನೊಂದು ಹುಳು' ಎಂದು ಹೇಳುವರೊ ಅವರು ಹುಳುವಾಗುವರು. ಯಾರು 'ನಾನು ಮುಕ್ತ, ನಾನು ಮುಕ್ತ' ಎಂದು ಭಾವಿಸುವರೊ ಅವರು ಮುಕ್ತರಾಗುವರು. ಯಾವಾಗಲೂ, 'ನಾನು ಮುಕ್ತ, ಪಾಪ ನನಗೆ ಅಂಟಿಕೊಳ್ಳುವುದಿಲ್ಲ' ಎಂಬ ಉನ್ನತ ದೃಷ್ಟಿ ಇರಲಿ" ಎಂದು ಬೈದು ಬುದ್ಧಿ ಹೇಳುತ್ತಿದ್ದರು.

'ಗುರು' ಎಂಬ ಪದದ ಅರ್ಥ ಕ್ರಮೇಣ ನನಗೆ ಅರಿವಾಯಿತು. ಅದು ನಿಧಾನವಾಗಿ ಆಯಿತು. ಆದರೆ ಅದರ ಪರಿಣಾಮ ಗಾಢವಾಗಿ ಆಗಿದೆ. ಗುರುವೇ ಸರ್ವಸ್ವ ಎಂಬುದು ಈಗ ನನಗೆ ಅರಿವಾಗಿದೆ. ಆತನ ಮೂಲಕ ನನ್ನ ಜೀವನ ಸಾರ್ಥಕವಾಗಿದೆ. ಯಾರು ನನ್ನ ಆತ್ಮವನ್ನು ಮುಕ್ತಗೊಳಿಸಿದ್ದಾರೊ ಅವರಿಗೆ ನಾನು ನನ್ನ ಅಲ್ಪ ಕೃತಜ್ಞತೆಯನ್ನೂ ಸಲ್ಲಿಸಿರುವೆನು. ಪಾನಮತ್ತನಾಗಿದ್ದಾಗ ಅವರನ್ನು ಬೈದಿರುವೆನು. ಅವರಿಗೆ ಸೇವೆ ಮಾಡುವ ಅವಕಾಶವಿದ್ದಾಗ ಅದನ್ನು ನಿರ್ಲಕ್ಷಿಸಿರುವೆನು. ಆದರೆ ನನಗೆ ಪಶ್ಚಾತ್ತಾಪವಿಲ್ಲ. ಎಲ್ಲ ಶಿಸ್ತಿನಿಂದಲೂ ತಪ್ಪಿಸಿಕೊಳ್ಳುವ ಪ್ರಯತ್ನದಲ್ಲಿ ನಾನು ನನಗೇ ತಿಳಿಯದಂತೆ ಒಂದು ಶಿಸ್ತಿಗೆ ಒಳಪಟ್ಟಿರುವೆನು. ನನ್ನ ಗುರುವಿನ ಕೃಪೆ ಹಾಗಿದೆ – ಅವರು ಅನಂತ ಕೃಪಾಸಿಂಧು. ಆ ಕೃಪೆಯು ಯೋಗ್ಯತೆಯನ್ನು ನೋಡಿಕೊಟ್ಟುದಲ್ಲ, ಪಾಪವಿದೆ ಎಂದು ಹಿಡಿದಿಟ್ಟು ಕೊಂಡುದೂ ಅಲ್ಲ. ಇದಕ್ಕೆ ಬದಲಾಗಿ, ಆ ಕೃಪೆಯು ಪಾಪಿ ಹಾಗೂ ಪುಣ್ಯಾತ್ಮರ ಮೇಲೆ ಒಂದೇ ಸಮನಾಗಿ ಧಾರಾಳವಾಗಿ ವರ್ಷಿಸಿರುವಂತದ್ದು. ಅಹೇತುಕ ಪ್ರೀತಿಯಿಂದ ಅವರು ನನಗೆ ಆಶ್ರಯವಿತ್ತಿರುವರು. ನನಗೆ ಇನ್ನು ಭಯವಿಲ್ಲ. ಜೈ ಶ್ರೀರಾಮಕೃಷ್ಣ! ✦

## ಯುವಸಂನ್ಯಾಸಿಗೆ 'ಯುವವಿಜ್ಞಾನಿ' ಪ್ರಶಸ್ತಿ

**ವಿಜ್ಞಾನ ಮತ್ತು ವೇದಾಂತಗಳು ಮೇಳವಿಸಿದ ಶಿಕ್ಷಣವೇ ನೈಜ ಶಿಕ್ಷಣ ಎಂದು ಸ್ವಾಮಿ ವಿವೇಕಾನಂದರು ಅಭಿಪ್ರಾಯಪಟ್ಟಿದ್ದರು. ರಾಮಕೃಷ್ಣ ಮಹಾಸಂಘದ ಯುವಸಂನ್ಯಾಸಿಗಳೊಬ್ಬರು ಇದನ್ನು ಸಾಧಿಸಿತೋರಿಸಿದ್ದಾರೆ. ಸ್ವಾಮಿ ವಿದ್ಯಾನಾಥಾನಂದಜಿ (ಮಹಾನ್ ಮಹಾರಾಜ್) ಅಂತಾರಾಷ್ಟ್ರೀಯ ಮಟ್ಟದಲ್ಲಿ ಘನತೆವೆತ್ತ ಗಣಿತಶಾಸ್ತ್ರಜ್ಞರು. ಅವರು ರಾಮಕೃಷ್ಣ ಮಿಷನ್ ವಿವೇಕಾನಂದ ವಿಶ್ವವಿದ್ಯಾನಿಲಯದ ಗಣಿತಶಾಸ್ತ್ರ ವಿಭಾಗದಲ್ಲಿ ಸೇವೆ ಸಲ್ಲಿಸುತ್ತಿದ್ದಾರೆ. ಅವರು ಗಣಿತಶಾಸ್ತ್ರದಲ್ಲಿ ಮಾಡಿರುವ ನೂತನ ಅನ್ವೇಷಣೆಗಳು ಮತ್ತು ಅಪಾರ ಸಾಧನೆಗಾಗಿ, Council of Scientific and Industrial Research (CSIR) ಎಂಬ ಹೆಸರಿನ ವೈಜ್ಞಾನಿಕ ಸಂಸ್ಥೆಯು 2011 ನೆಯ ಸಾಲಿನ ಪ್ರತಿಷ್ಠಿತ 'ಶಾಂತಿ ಸ್ವರೂಪ ಭಟ್ನಾಗರ್ ಪ್ರಶಸ್ತಿ' ಯನ್ನು ಅವರಿಗೆ ಪ್ರದಾನ ಮಾಡಿದೆ. ಇದು ರಾಮಕೃಷ್ಣ ಮಿಷನ್ ವಿವೇಕಾನಂದ ವಿಶ್ವವಿದ್ಯಾನಿಲಯಕ್ಕೆ ಗೌರವವನ್ನು ತರುವ ವಿಷಯವಾಗಿದೆ. 45 ವರ್ಷಕ್ಕಿಂತ ಕಡಮೆ ಇದ್ದು, ಗಣನೀಯ ಸಾಧನೆಯನ್ನು ಮಾಡಿರುವ ಭಾರತೀಯ ಯುವವಿಜ್ಞಾನಿಗಳಿಗೆ ಈ ಪ್ರಶಸ್ತಿಯನ್ನು ಪ್ರತಿವರ್ಷ ನೀಡಲಾಗುವುದು.** ✦